# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 150 | Pages. 2 | Date: 17-04-2025, THURSDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 150 - ಪುಟಗಳು : 2 - 17 ಏಪ್ರಿಲ್ 2025 ಗುರುವಾರ Ph: 8762954248 ದರ : ₹1


# ನಿರೀಕ್ಷೆಯಂತೆ ಹೇಮಲತಾ ನಗರಸಭೆ ಉಪಾಧ್ಯಕ್ಷೆ

## ಕುತೂಹಲ ಕೆರಳಿಸಿದ ಮುಂದಿನ ಬೆಳವಣಿಗೆ : ಜೆಡಿಎಸ್ ವಿರುದ್ಧ ಗೆಲ್ಲುತ್ತಾರಾ ಚಂದ್ರೇಗೌಡ..?

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರಸಭೆ ಉಪಾಧ್ಯಕ್ಷ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಧರ್ಮ ಪಾಲನೆಯಾಗಿದ್ದು ನಿರೀಕ್ಷೆಯಂತೆ ಹೇಮಲತಾ ಕಮಲ್ ಕುಮಾರ್ ಅವರು ಅವಿರೋಧ ಆಯ್ಕೆಯಾಗಿದ್ದಾರೆ.



35ನೇ ವಾರ್ಡ್‌ನ ಲತಾದೇವಿ ಸುರೇಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಜೆಡಿಎಸ್ ಹಾಗೂ ಬಿಜೆಪಿ ಒಮ್ಮತದಿಂದ ಹೇಮಲತಾ ಕಮಲ್‌ಕುಮಾರ್ ಅವರನ್ನು ಬೆಂಬಲಿಸಿದೆ. ಹೇಮಲತಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನಲೆಯಲ್ಲಿ ಉಪವಿಭಾಗಾಧಿಕಾರಿ ಜೆ.ಬಿ. ಮಾರುತಿ ಅವಿರೋಧ ಆಯ್ಕೆ ಘೋಷಿಸಿದರು. ಆ ಮೂಲಕ ನಗರಸಭೆ ರಾಜಕೀಯದಲ್ಲಿ ಮೈತ್ರಿ ಪಾಲನೆಯಾಗಿದೆ ಎಂಬ ಸಂದೇಶ ರವಾನೆಯಾಗಿದೆ. ಆದರೆ ನಗರಸಭೆ ಅಧ್ಯಕ್ಷರ ಚುನಾವಣೆಯಲ್ಲಿ ಮೈತ್ರಿ ಏನಾಗಿರುತ್ತದೆ ಎಂಬ ಕುತೂಹಲ ಕೆರಳಿಸಿದೆ.




ನಗರಸಭೆ ಉಪಾಧ್ಯಕ್ಷರಾಗಿ ಹೇಮಲತಾ ಕಮಲ್‌ಕುಮಾರ್ ಆಯ್ಕೆಯಾಗುತ್ತಿದ್ದಂತೆ ಜೆಡಿಎಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ವಿತರಿಸಿ ಸಂಭ್ರಮಿಸಿದರು.



ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ, ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಹಾಗೂ ಎಲ್ಲಾ ಸದಸ್ಯರು ಪುಷ್ಪಗುಚ್ಛ ನೀಡಿ ಶುಭ ಹಾರೈಸಿದರು.

ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಮಾತನಾಡಿ, ಹೇಮಲತಾ ಕಮಲ್‌ಕುಮಾರ್ ಅವರು ನಗರಸಭೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷರ ಚುನಾವಣೆ ಸುಗಮವಾಗಿ ನಡೆಯುತ್ತದೆ. ಒಳ್ಳೆಯ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆ. ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುತ್ತದೆ ಆ ಬಗ್ಗೆ ಯಾವ ಗೊಂದಲ ಬೇಡ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

### ಮುಗುಳ್ನಗೆಯ ಸಂದೇಶ ಏನು

ನಗರಸಭೆಗೆ ನೂತನ ಅಧ್ಯಕ್ಷರ ಆಯ್ಕೆಗೆ 18 ಸದಸ್ಯರ ಬಲ ಬೇಕು. ಅದು ಜೆಡಿಎಸ್‌ಗೆ ಇದೆ. ಆದರೆ ಅವಿಶ್ವಾಸ ಮಂಡನೆ ಮಾಡಿ ಹಾಲಿ ಅಧ್ಯಕ್ಷರನ್ನು ಕೆಳಗಿಳಿಸಲು 26 ಸದಸ್ಯರ ಸಹಮತ ಬೇಕು. ಅದಕ್ಕಾಗಿ ಬಿಜೆಪಿ ಸದಸ್ಯರ ಸಂಪರ್ಕದಲ್ಲಿ ಜೆಡಿಎಸ್ ನಾಯಕರು ಬಿಜೆಪಿ ಸದಸ್ಯರನ್ನು ಓಲೈಸಲು ಯತ್ನಿಸುತ್ತಿದ್ದಾರೆ . ಒಂದು ವೇಳೆ ಮೈತ್ರಿ ಧರ್ಮ ಪಾಲನೆ ನೆಪದಲ್ಲಿ ಬಿಜೆಪಿಯ ಕೆಲವು ಸದಸ್ಯರು ಮನ್ನಣೆ ನೀಡಬಹುದು.

ಆದರೆ ಅವಿಶ್ವಾಸ ನಿರ್ಣಯ ಸಭೆಗೆ ತಮ್ಮ ವಿಶ್ವಾಸದಲ್ಲಿರುವ ಬಿಜೆಪಿ ಹಾಗೂ ಜೆಡಿಎಸ್‌ನ ಕೆಲವು ಸದಸ್ಯರನ್ನು ಸಭೆಗೆ ಗೈರಾಗುವಂತೆ ಮಾಡುವುದು ಮತ್ತೊಂದು ಲೆಕ್ಕಾಚಾರ ಇರಬಹುದು. ಆ ಕಾರಣದಿಂದಲೇ ಚಂದ್ರೇಗೌಡ ಅವರು ಮುಗುಳ್ನಗೆ ಬೀರಿದ್ದಾರೆ ಎಂಬ ಮಾತುಗಳು ರಾಜಕೀಯ ಪಡಸಾಲೆಯಲ್ಲಿ ಕೇಳಿಬರುತ್ತಿವೆ.

### ಸವಾಲು ಎದುರಿಸಲು ಸಿದ್ಧ

ನಾನು ನಗರಸಭೆ ಅಧ್ಯಕ್ಷನಾಗಿ ಮುಂದುವರೆಯುತ್ತೇನೆ. ಅಭಿವೃದ್ಧಿ ವಿಚಾರದಲ್ಲಿ ನನಗೆ ಹೇಮಲತಾ ಅವರು ಸಾಥ್‌ಕೊಡುತ್ತಾರೆಂಬ ವಿಶ್ವಾಸವಿದೆ. ಮುಂದಿನ ದಿನಗಳಲ್ಲಿ ಇಬ್ಬರೂ ಒಟ್ಟಾಗಿ ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇವೆ ಎಂದು ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಹೇಳಿದರು.

ನನ್ನ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ವಿಚಾರವಾಗಿ ಏನೂ ಗೊತ್ತಿಲ್ಲ. ನಗರಸಭೆ ಅಧ್ಯಕ್ಷನಾಗಿ ನಾನೇ ಮುಂದುವರೆಯುತ್ತೇನೆ. ಅಧ್ಯಕ್ಷನಾಗಿ ನಾನೇ ಇರುತ್ತೇನೆಂದು ಮುಖಂಡರಲ್ಲಿ ಕೋರಿದ್ದೇನೆ. ಈ ವಿಚಾರದಲ್ಲಿ ಅವರ ನಿಲುವು ಏನಿದೆ ಎಂಬುದು ಗೊತ್ತಿಲ್ಲ. ಯಾವುದೇ ರೀತಿಯ ಪರೀಕ್ಷೆ ಬಂದರೂ ಸಮರ್ಥವಾಗಿ ಎದುರಿಸುತ್ತೇನೆ. ಆರು ತಿಂಗಳಲ್ಲಿ ಕೆಲಸ ಮಾಡಲು ಸಾಧ್ಯವಾಗಿಲ್ಲ, ನಾಲ್ಕು-ಆರು ತಿಂಗಳಿಗೆ ಓಡಿ ಹೋಗಲು ಆಗುವುದಿಲ್ಲ. ಸ್ವಾಭಿಮಾನದ ಮತಗಳನ್ನು ಸ್ನೇಹಿತರ ಬಳಿ ಕೇಳುತ್ತೇನೆ. ಯಾರೊಂದಿಗು ವಿರೋಧ ಕಟ್ಟಿಕೊಳ್ಳುವ ಅವಶ್ಯಕತೆಯಿಲ್ಲ. ಕೆಲಸ ಮಾಡಲು ಅವಕಾಶ ಕೊಡಿ ಎಂದು ಮನವಿ ಮಾಡಿದ್ದೇನೆ. ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

ಅವಿಶ್ವಾಸ ನಿರ್ಣಯಕ್ಕೆ ಸಭೆ ಕರೆಯಲು ಅರ್ಜಿ ಕೊಟ್ಟಿದ್ದಾರೆ. ಯಾರ ಮಾತು ಕೇಳಿಕೊಂಡು ಪತ್ರ ಕೊಟ್ಟಿದ್ದಾರೆಂಬುದು ಗೊತ್ತಿಲ್ಲ. ಮುಂದಿನ ದಿನಗಳಲ್ಲಿ ಅವರ ಮನ ಪರಿವರ್ತನೆ ಆಗಬಹುದೆಂಬ ವಿಶ್ವಾಸವಿದೆ. ಹೀಗಾಗಿ ಸಭೆ ಕರೆದಿಲ್ಲ. ಮುಂದೆ ಏನಾಗುತ್ತದೆ ಎಂಬುದನ್ನು ಕಾದು ನೋಡೋಣ ಎಂದರು.

ನಗರಸಭೆ ನೂತನ ಉಪಾಧ್ಯಕ್ಷೆ ಹೇಮಲತಾ ಕಮಲ್‌ಕುಮಾರ್ ಮಾತನಾಡಿ, ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಶ್ರೀಮತಿ ಭವಾನಿ ರೇವಣ್ಣ ಹಾಗು ಸೂರಜ್ ರೇವಣ್ಣ, ಬಿಜೆಪಿಯ ಪ್ರೀತಮ್ ಜೆ. ಗೌಡ, ಹಾಗೂ ನನ್ನನ್ನು ಬೆಂಬಲಿಸಿದ ಎಲ್ಲಾ ಪಕ್ಷಗಳ ಸದಸ್ಯರಿಗೂ ಧನ್ಯವಾದ ಸಲ್ಲಿಸುತ್ತೇನೆ ಎಂದರು

ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡರ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಸಭೆ ಕರೆಯಬೇಕೆಂದು 20 ಸದಸ್ಯರ ಸಹಿ ಒಳಗೊಂಡ ಪತ್ರವನ್ನು ಉಪಾಧ್ಯಕ್ಷೆ ಹೇಮಲತಾ ಕಮಲ್‌ಕುಮಾರ್ ಹಾಗೂ ನಗರಸಭೆ ಆಯುಕ್ತ ರಮೇಶ್ ಅವರಿಗೆ ಸಲ್ಲಿಸಲಾಯಿತು.

### ಕುತೂಹಲ ಘಟ್ಟದಲ್ಲಿ ನಗರಸಭೆ ರಾಜಕೀಯ

ಎಂ. ಚಂದ್ರೇಗೌಡ ಅವರನ್ನು ನಗರಸಭೆ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲೇಬೇಕೆಂದು ಪಣ ತೊಟ್ಟಿರುವ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಮೊದಲ ಹೆಜ್ಜೆ ಎಂಬಂತೆ ನೂತನವಾಗಿ ಆಯ್ಕೆಯಾದ ಉಪಾಧ್ಯಕ್ಷರ ಮೂಲಕ ಅವಿಶ್ವಾಸ ನಿರ್ಣಯಕ್ಕೆ ವಿಶೇಷ ಸಭೆ ಕರೆಯುವಂತೆ ಕೋರಿದ್ದಾರೆ. ಅರ್ಜಿ ಸಲ್ಲಿಕೆಯಾದ 10 ದಿನಗಳ ಒಳಗೆ ಸಭೆ ನಡೆಯಬೇಕಿರುವುದರಿಂದ ಮುಂದಿನ ದಿನಗಳು ಕುತೂಹಲಕಾರಿಯಾಗಿವೆ.

ನಗರಸಭೆಯ 35 ಸದಸ್ಯರ ಪೈಕಿ 14 ಬಿಜೆಪಿ, 17 ಜೆಡಿಎಸ್, 2 ಕಾಂಗ್ರೆಸ್ ಹಾಗೂ ಇಬ್ಬರು ಪಕ್ಷೇತರ ಸದಸ್ಯರಿದ್ದಾರೆ. ಅದರಲ್ಲಿ ಬಿಜೆಪಿಯ ಇಬ್ಬರು ಸದಸ್ಯರು ಈಗಾಗಲೇ ಜೆಡಿಎಸ್ ಜೊತೆ ಗುರುತಿಸಿಕೊಂಡಿದ್ದಾರೆ. ನಗರಸಭೆ ಅಧ್ಯಕ್ಷ ಸ್ಥಾನದಿಂದ ಚಂದ್ರೇಗೌಡ ಅವರನ್ನು ಕೆಳಗಿಳಿಸಲು ಒಟ್ಟು ಸದಸ್ಯರ ಸಂಖ್ಯೆಯ ಎರಡನೇ ಮೂರರಷ್ಟು ಅಂದರೆ 26 ಸದಸ್ಯರ ಅವಶ್ಯಕತೆ ಇದೆ. ಸದ್ಯದ ಲೆಕ್ಕಾಚಾರದ ಪ್ರಕಾರ ಜೆಡಿಎಸ್‌ಗೆ ಶಾಸಕ, ವಿಧಾನ ಪರಿಷತ್ ಸದಸ್ಯ 21 ಸದಸ್ಯರ ಬೆಂಬಲವಿದೆ. ತಮ್ಮ ಕಾರ್ಯ ಸಾಧನೆಗೆ ಇನ್ನು ಐವರ ಬೆಂಬಲ ಬೇಕಾಗಿದ್ದು ಅದಕ್ಕಾಗಿ ಬಿಜೆಪಿ ಸದಸ್ಯರ ನೆರವು ಕೋರಲು ಶಾಸಕ ಹೆಚ್.ಪಿ. ಸ್ವರೂಪ್ ಮುಂದಾಗಿದ್ದಾರೆ. ಆದರೆ ಯಾವ ಕಾರಣಕ್ಕೂ ಬಿಜೆಪಿ ಸದಸ್ಯರು ಜೆಡಿಎಸ್‌ಗೆ ಬೆಂಬಲ ನೀಡುವುದಿಲ್ಲ ಎಂಬ ಅಚಲ ವಿಶ್ವಾಸದಲ್ಲಿ ಎಂ. ಚಂದ್ರೇಗೌಡ ಅವರು ಇದ್ದಂತಿದೆ. ಅದೇ ಕಾರಣಕ್ಕೆ ಅವರು ಯಾವುದೇ ಸಮಸ್ಯೆ ಬಂದರೂ ಎದುರಿಸುತ್ತೇನೆ. ಸ್ನೇಹಿತರು ಸ್ವಾಭಿಮಾನದಿಂದ ನನ್ನನ್ನೇ ಬೆಂಬಲಿಸುತ್ತಾರೆ. ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುವ ಮಾತೇ ಇಲ್ಲ ಎನ್ನುವ ಮೂಲಕ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹಾಗು ಶಾಸಕ ಹೆಚ್.ಪಿ. ಸ್ವರೂಪ್ ಅವರಿಗೆ ನೇರ ಸವಾಲು ಹಾಕಿದ್ದಾರೆ.

---

## ಸಾಹಿತಿ ಬಾನು ಮುಷ್ತಾಕ್‌ಗೆ ಕೆಯುಡಬ್ಲ್ಯೂಜೆ ಅಭಿನಂದನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಪ್ರತಿಷ್ಟಿತ ಅಂತರಾಷ್ಟ್ರೀಯ ಬುಕರ್ ಪ್ರಶಸ್ತಿಗೆ ಪ್ರವೇಶ ಪಡೆದಿದ್ದ ಸಾಹಿತಿ ಬಾನು ಮುಷ್ತಾಕ್ ಅವರ ಸಣ್ಣ ಕಥೆಗಳ ಅನುವಾದಿತ ಸಂಕಲನ ಹಾರ್ಟ್ ಲ್ಯಾಂಪ್ ಕೃತಿ ಅಂತಿಮ ಸುತ್ತಿಗೆ ಆಯ್ಕೆಯಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ(ಕೆಯುಡಬ್ಲ್ಯೂಜೆ)ದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಹಾಸನದಲ್ಲಿ ಬಾನು ಮುಷ್ತಾಕ್ ಅವರ ಮನೆಗೆ ಭೇಟಿ ನೀಡಿ ಅಮೃತ ಬೀಜ ಕೃತಿ ನೀಡಿ ಅಭಿನಂದಿಸಿದರು.

ಶಿವಾನಂದ ತಗಡೂರು ಮಾತನಾಡಿ, ಹಾಸನದಿಂದ ಲಂಕೇಶ್ ಪತ್ರಿಕೆಯ ವರದಿಗಾರರಾಗಿ ಗುರುತಿಸಿಕೊಂಡ ಬಾನು ಮುಷ್ತಾಕ್ ಅವರು ವಕೀಲರಾಗಿ, ನಗರಸಭೆ ಸದಸ್ಯರಾಗಿ ಹಾಗೂ ಪ್ರಗತಿಪರ ಸಾಹಿತಿಯಾಗಿ ಗುರುತಿಸಿಕೊಂಡವರು. ಅನ್ಯಾಯದ ವಿರುದ್ಧ ಧ್ವನಿ ಎತ್ತಿದವರು. ಸಂಘಟಕಿಯಾಗಿಯೂ ಕೆಲಸ ಮಾಡಿದವರು. ಅವರ ಕೃತಿ ಬುಕರ್ ಪ್ರಶಸ್ತಿಯ ಹೊಸ್ತಿಲಿನ ತನಕ ಬಂದು ನಿಂತಿರುವುದು ಹೆಮ್ಮೆಯ ಸಂಗತಿ ಎಂದರು. ಗಿರೀಶ್ ಕಾಸರವಳ್ಳಿ ನಿರ್ದೇಶನ ಮಾಡಿದ ಹಸೀನಾ ಚಲನಚಿತ್ರ ಕಥೆ ಕೂಡ ಬಾನು ಮುಷ್ತಾಕ್ ಅವರ ಹಸೀನಾ ಮತ್ತು ಇತರ ಕಥೆಗಳಿಂದಲೇ ಆಯ್ಕೆ ಮಾಡಲಾಗಿದೆ. ಹಸೀನಾ ಚಿತ್ರಕ್ಕೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಿಕ್ಕಾಗ ಇಡೀ ತಂಡವನ್ನು ಹಾಸನಕ್ಕೆ ಆಹ್ವಾನಿಸಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಕಲಾಭವನದಲ್ಲಿ ಏರ್ಪಡಿಸಿದ್ದ ಅದ್ದೂರಿ ಕಾರ್ಯಕ್ರಮದಲ್ಲಿ ಸನ್ಮಾನಿಸಿತ್ತು. ಅದೆಲ್ಲವೂ ಮರೆಯಲಾಗದ ಕ್ಷಣ ಎಂದು ಸ್ಮರಿಸಿದರು.

ಬಾನು ಮುಷ್ತಾಕ್ ಅವರ ಹಾರ್ಟ್ ಲ್ಯಾಂಪ್ ಕೃತಿ ಬುಕರ್ ಪ್ರಶಸ್ತಿಗೆ ಭಾಜನವಾಗಲಿ ಎಂದು ಶುಭ ಹಾರೈಸಲಾಯಿತು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಕೆ.ಆರ್. ಮಂಜುನಾಥ್, ಫ್ರಂಟ್ ಲೈನ್ ಮ್ಯಾಗಜಿನ್ ವರದಿಗಾರ ವಿಕಾರ್ ಅಹಮದ್ ಹಾಜರಿದ್ದರು.

## ಬೀದಿ ಬದಿ ವ್ಯಾಪಾರಿಗಳಿಂದ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೀದಿ ಬದಿ ವ್ಯಾಪಾರಿಗಳಿಂದ ನಗರಸಭೆಯವರು ಅಕ್ರಮ ಸುಂಕ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿ ಬೀದಿ ಬದಿ ವ್ಯಾಪಾರಿಗಳು ರೈತ ಹಾಗೂ ಕನ್ನಡಪರ ಸಂಘಟನೆಗಳ ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಆನೆಕೆರೆ ರವಿ ಮಾತನಾಡಿ, ಜೀವನೋಪಾಯಕ್ಕಾಗಿ ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಂಡು ಬದುಕುತ್ತಿರುವ ಬೀದಿ ಬದಿ ವ್ಯಾಪಾರಿಗಳಿಂದ ನಗರಸಭೆ ಅಧಿಕಾರಿಗಳು ಅಕ್ರಮವಾಗಿ ಸುಂಕ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಯಾವುದೇ ರೀತಿಯ ರಶೀದಿ ನೀಡದೆ ಮನಬಂದಂತೆ ಸುಂಕ ವಸೂಲಿ ಮಾಡುತ್ತಿರುವ ನಗರಸಭೆ ಅಧಿಕಾರಿಗಳ ನಡೆ ಖಂಡನೀಯ, ಕೂಡಲೇ ಈ ಬಗ್ಗೆ ಜಿಲ್ಲಾಧಿಕಾರಿಗಳು ಗಮನಹರಿಸಿ ಇದಕ್ಕೆ ಕಡಿವಾಣ ಹಾಕಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ಹಿಂದೆ ಕೂಡ ಹಲವು ಬಾರಿ ಮನವಿ ಮಾಡಲಾಗಿದ್ದು, ಅಧಿಕಾರಿಗಳು ಈ ಬಗ್ಗೆ ಸರಿಯಾದ ಉತ್ತರ ನೀಡಿಲ್ಲ. ಬೀದಿ ಬದಿ ವ್ಯಾಪಾರಿಗಳಿಗೆ ಕುಡಿಯುವ ನೀರು, ನೆರಳು ಹಾಗೂ ಇನ್ನಿತರೆ ಯಾವುದೇ ಮೂಲ ಸೌಕರ್ಯ ಒದಗಿಸದೆ ಇದ್ದರೂ, ಸುಂಕ ವಸೂಲಿಗೆ ಮುಂದಾಗುತ್ತಿರುವ ನಗರಸಭೆ ಅಧಿಕಾರಿಗಳು ಕೂಡಲೇ ಇದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಮೊದಲು ಬೀದಿ ಬದಿ ವ್ಯಾಪಾರಿಗಳಿಗೆ ಅಗತ್ಯವಿರುವ ಮೂಲ ಸೌಕರ್ಯ ಕಲ್ಪಿಸಿಕೊಡಲಿ, ಅದಾದ ಬಳಿಕ ಸುಂಕ ವಸೂಲಿ ಮಾಡಲಿ, ಅದುವರೆಗೂ ಸುಂಕ ವಸೂಲಿ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

## ಗಾಯಾಳುವಿಗೆ ಚಿಕಿತ್ಸೆ ಶಾಸಕ ಮಂಜು ಔದಾರ್ಯ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಅಪಘಾತಕ್ಕೀಡಾಗಿ ತಲೆಗೆ ತೀವ್ರ ಪೆಟ್ಟು ಬಿದ್ದು ರಕ್ತದ ಮಡುವಿನಲ್ಲಿ ಬಿದ್ದಿದ್ದ ಯುವಕನಿಗೆ ಸ್ಥಳದಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಅಂಬುಲೆನ್ಸ್ ಕರೆಸಿ ಹೆಚ್ಚಿನ ಚಿಕಿತ್ಸೆಗೆ ಯುವಕನನ್ನು ಜಿಲ್ಲಾಸ್ಪತ್ರೆಗೆ ಕಳುಹಿಸುವ ಮೂಲಕ ಶಾಸಕ ಸಿಮೆಂಟ್ ಮಂಜು ಮಾನವೀಯತೆ ಮೆರೆದಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 75 ಆಲೂರು ತಾಲ್ಲೂಕು ವ್ಯಾಪ್ತಿಯ ಮಣಿಪುರ ಸಮೀಪ ಸಕಲೇಶಪುರ ತಾಲ್ಲೂಕಿನ ದೇವಾಲದಕೆರೆ ಗ್ರಾ.ಪಂ ವ್ಯಾಪ್ತಿಯ ಹೊಡಚಹಳ್ಳಿ ಗ್ರಾಮದ ಆಕಾಶ್ ಎಂಬ ಯುವಕ ಬೈಕ್‌ನಲ್ಲಿ ತಮ್ಮ ಸ್ನೇಹಿತನ ಜೊತೆ ಹೋಗುವಾಗ ಅಪಘಾತಕ್ಕೀಡಾಗಿ ತಲೆಗೆ ತೀವ್ರ ಪೆಟ್ಟು ಬಿದ್ದು ರಸ್ತೆಯಲ್ಲೇ ರಕ್ತದ ಮಡುವಿನಲ್ಲಿ ಬಿದ್ದಿದ್ದ. ಈ ಸಂಧರ್ಭದಲ್ಲಿ ಆಲೂರು ಕಡೆಯಿಂದ ಸಕಲೇಶಪುರಕ್ಕೆ ಹೋಗುತ್ತಿದ್ದ ಶಾಸಕ ಸಿಮೆಂಟ್ ಮಂಜು ತಕ್ಷಣ ಇಳಿದು ಯುವಕನ ನೆರವಿಗೆ ಮುಂದಾಗಿದ್ದಾರೆ. ಆಲೂರಿನಿಂದ ಅಂಬುಲೆನ್ಸ್ ಕರೆಸಿ ಪ್ರಾಥಮಿಕ ಚಿಕಿತ್ಸೆ ನೀಡಿ ಜಿಲ್ಲಾಸ್ಪತ್ರೆಗೆ ಕಳುಹಿಸುವ ಮೂಲಕ ಯುವಕನಿಗೆ ನೆರವಾಗಿದ್ದಾರೆ.

## ಹಸು ಕಳ್ಳನಿಗೆ ಧರ್ಮದೇಟು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಳ್ಳತನ ಮಾಡಿ ತಂದಿದ್ದ ಹಸುವನ್ನು ವಾರದ ಜಾನುವಾರು ಸಂತೆಯಲ್ಲಿ ಮಾರಾಟ ಮಾಡುವ ವೇಳೆ ಸಿಕ್ಕಿಬಿದ್ದ ಕಳ್ಳನಿಗೆ ಧರ್ಮದೇಟು ನೀಡಿದ ಘಟನೆ ನಗರದ ಸಂತೆಪೇಟೆಯಲ್ಲಿ ನಡೆದಿದೆ.

ಜಾನುವಾರು ಸಂತೆಯಲ್ಲಿ ಕಳ್ಳನೊಬ್ಬ ಹಸುವನ್ನು ಕಳ್ಳತನ ಮಾಡಿ ತಂದು ಸಂತೆಯಲ್ಲಿ ಮಾರಾಟ ಮಾಡಲು ಮುಂದಾಗಿದ್ದ. ಕಳ್ಳತನವಾದ ಹಸುವಿನ ಮಾಲೀಕರು ಹುಡುಕಿಕೊಂಡು ಬಂದಾಗ ಸಂತೆಯಲ್ಲಿ ಮಾರಾಟ ಮಾಡುವ ವೇಳೆ ಕಳ್ಳ ಸಿಕ್ಕಿಬಿದ್ದಿದ್ದಾನೆ.

ಲಕ್ಷ ರೂ.ಗೂ ಹೆಚ್ಚು ಬೆಲೆ ಬಾಳುವ ಹಸು ಇದಾಗಿದ್ದು, ಕಳ್ಳತನವಾದ ವೇಳೆ ಹುಡುಕಿ ಸುಸ್ತಾಗಿದ್ದ ಮಾಲೀಕರು ಸಂತೆಯಲ್ಲಿ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಇಂದಿನ ಸಂತೆಗೆ ಬಂದಿದ್ರು. ಈ ವೇಳೆ ಸಿಕ್ಕಿಹಾಕಿಕೊಂಡ ಕಳ್ಳನಿಗೆ ಹಸುವಿನ ಮಾಲೀಕರು ಹಾಗೂ ಸಾರ್ವಜನಿಕರು ಧರ್ಮದೇಟು ನೀಡಿದರು. ಹಸುವಿನ ಮಾಲೀಕರು ಹಾಗೂ ಕಳ್ಳತನ ಮಾಡಿದ ವ್ಯಕ್ತಿ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

## ಎಸ್ಟೇಟ್ ಮಾಲೀಕನಿಗೆ ಅಸ್ಸಾಂ ಕಾರ್ಮಿಕರ ವಂಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾಫಿ ತೋಟದ ಕೆಲಸಕ್ಕೆಂದು ಬಂದಿದ್ದ ಅಸ್ಸಾಂ ಮೂಲದ ಕಾರ್ಮಿಕರು 1.35 ಲಕ್ಷ ರೂ. ಮುಂಗಡ ಪಡೆದು ನಾಪತ್ತೆಯಾಗಿದ್ದು ಅವರನ್ನು ಪತ್ತೆಮಾಡಿ ಹಣ ವಾಪಸ್ ಕೊಡಿಸಬೇಕು ಎಂದು ಕಾಫಿ ಬೆಳೆಗಾರರೊಬ್ಬರು ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ.

ಆಲೂರು ತಾಲ್ಲೂಕಿನ ಕೆ. ಹೊಸಕೋಟೆ ಹೋಬಳಿ ಮಲಗಳಲೆ ಗ್ರಾಮದ ಹೆಚ್.ಎ. ಸತೀಶ್ ಅವರು ಠಾಣೆಗೆ ದೂರು ನೀಡಿದ್ದಾರೆ. ನಾಲ್ಕು ತಿಂಗಳ ಹಿಂದೆ ಅಸ್ಸಾಂ ಮೂಲದ ಹಬೀಬ್ ಎಂಬಾತ ಕುಟುಂಬ ಸಮೇತ ಕೆಲಸ ಕೇಳಿಕೊಂಡು ಬಂದಿದ್ದ. ಕಾಫಿ ತೋಟದ ಕೆಲಸಕ್ಕೆ ಕಾರ್ಮಿಕರ ಅವಶ್ಯಕತೆ ಇದ್ದರಿಂದ ಸೇರಿಸಿಕೊಂಡಿದ್ದೆ. ಕೆಲ ತಿಂಗಳ ಹಿಂದೆ ದುಡ್ಡಿನ ಅವಶ್ಯಕತೆಯಿದ್ದು ಕೆಲಸ ಮಾಡಿ ಸಾಲ ತೀರಿಸುತ್ತೇನೆ ಹಣ ಬೇಕೆಂದು ಕೇಳಿದಾಗ 1.35 ಲಕ್ಷ ರೂ. ಕೊಟ್ಟಿದ್ದೆ ಎಂದು ಸತೀಶ್ ಹೇಳಿದ್ದಾರೆ.

ಏ. 14 ರಂದು ಹಬೀಬ್ ಹಾಗೂ ಕುಟುಂಬಸ್ಥರು ಮಗ್ಗೆ ಸಂತೆಗೆ ಹೋಗುವುದಾಗಿ ಹೇಳಿ ತೆರಳಿದವರು ವಾಪಾಸ್ ಬಂದಿಲ್ಲ. ರಾತ್ರಿಯಾದರೂ ಶೆಡ್‌ಗೆ ವಾಪಾಸ್ ಬಂದಿಲ್ಲ. ಅವರ ಮೊಬೈಲ್ ಕೂಡ ಸ್ವಿಚ್ಡ್ ಆಫ್ ಆಗಿದೆ. ಅವರನ್ನು ಹುಡುಕಿ ಕೊಟ್ಟಿರುವ ಹಣ ವಾಪಾಸ್ ಕೊಡಿಸಬೇಕೆಂದು ಅವರು ದೂರಿನಲ್ಲಿ ಒತ್ತಾಯಿಸಿದ್ದಾರೆ.

## ಬೆಲೆ ಏರಿಕೆ ಖಂಡಿಸಿ ಇಂದು ಯೂತ್ ಕಾಂಗ್ರೆಸ್ ಪ್ರತಿಭಟನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ಖಂಡಿಸಿ ನಗರದಲ್ಲಿ ಏ. 17ರ ಗುರುವಾರ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ರಂಗಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ನಿರಂತರವಾಗಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಲೇ ಇದೆ. ಗ್ಯಾಸ್ ಸಿಲಿಂಡರ್, ಸಿಮೆಂಟ್ ಕಬ್ಬಿಣ ಇಂಧನ ಸೇರಿದಂತೆ ಹಲವು ಅಗತ್ಯ ವಸ್ತುಗಳ ಬೆಲೆ ದಿನೇ ದಿನೆ ಹೆಚ್ಚಳವಾಗುತ್ತಿದೆ.

ಜನರಿಗೆ ಸಮೃದ್ಧಿ ಜೀವನದ ಭರವಸೆ ನೀಡಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ತನ್ನ ಅವಧಿಯುದ್ದಕ್ಕೂ ಜನ ವಿರೋಧಿ ಆಡಳಿತ ನಡೆಸುತ್ತಿದೆ ಎಂದು ದೂರಿದರು.

ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವ ಹಲವು ವಸ್ತುಗಳ ಬೆಲೆ ಏರಿಕೆಯಿಂದ ಜನಜೀವನ ದುಸ್ತರವಾಗಿದೆ. ಕೂಡಲೇ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಇಳಿಸಬೇಕು ಇಲ್ಲವಾದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ನಗರದ ತಣ್ಣೀರು ಹಳ್ಳದಿಂದ ಆರಂಭವಾಗುವ ಪ್ರತಿಭಟನಾ ಮೆರವಣಿಗೆ, ವಿಜಯನಗರದಲ್ಲಿರುವ ಆದಾಯ ತೆರಿಗೆ ಇಲಾಖೆಯವರೆಗೂ ಸಾಗಲಿದೆ. ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಟಿಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರಾದ ಸಮೀರ್ ಪಾಷ, ಶರತ್, ರವಿ ಕಿರಣ್ ಇತರರಿದ್ದರು.

# ಸಂಭ್ರಮದ ವೀರಭದ್ರೇಶ್ವರ ಸ್ವಾಮಿ ರಥೋತ್ಸವ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲ್ಲೂಕಿನ ಕುದರಂಗಿ ಶ್ರೀ ವೀರಭದ್ರೇಶ್ವರ ಸ್ವಾಮಿ ಬ್ರಹ್ಮರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ವಿಜೃಂಭಣೆಯಿಂದ ನೆರವೇರಿತು.

ಜಾತ್ರಾ ಮಹೋತ್ಸವ ಅಂಗವಾಗಿ ಸೋಮವಾರದಿಂದಲೇ ವಿವಿಧ ಪೂಜಾ ಕಾರ್ಯ ಆರಂಭಗೊಂಡವು. ಮಂಗಳವಾರ ಬೆಳಿಗ್ಗೆ ಮಹಾಮಂಗಳಾರತಿ, ಉತ್ಸವ ಮೂರ್ತಿಗಳಿಗೆ ಅಲಂಕಾರ, ಪ್ರದಕ್ಷಣೆ ಬಳಿಕ ಶ್ರೀ ವೀರಭದ್ರೇಶ್ವರ ಸ್ವಾಮಿ ಮತ್ತು ಭದ್ರಕಾಳಿ ದೇವಿಯ ಉತ್ಸವ ಮೂರ್ತಿಯನ್ನು ಪುಷ್ಪ ರಥದಲ್ಲಿ ಪ್ರತಿಷ್ಠಾಪಿಸಿ ಭಕ್ತರ ಜಯಘೋಷಗಳೊಂದಿಗೆ ರಥ ಎಳೆಯಲಾಯಿತು.

ಬೆಳಿಗ್ಗೆ 11 ಗಂಟೆಗೆ ರಾಜ್ಯೋತ್ಸವ, ಕಲ್ಯಾಣ ಮಹೋತ್ಸವ, ಬಲಿಪೂಜೆ ಬಳಿಕ ಮಧ್ಯಾಹ್ನ 1 ಗಂಟೆಗೆ ದೇವಸ್ಥಾನದ ಆವರಣದಲ್ಲಿ ನೆರೆದಿದ್ದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನೆರವೇರಿಸಲಾಯಿತು. ನೂರಾರು ಭಕ್ತರು ರಥವನ್ನು ಎಳೆದು ಭಕ್ತಿ ಸಮರ್ಪಿಸಿದರು. ಈ ವೇಳೆ ನೆರೆದಿದ್ದ ಭಕ್ತರು ರಥದ ಮೇಲೆ ಬಾಳೆಹಣ್ಣು ಎಸೆದು ಜಯಘೋಷ ಮೊಳಗಿಸಿದರು.

ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ಭಕ್ತರಿಗೆ ದೇವಸ್ಥಾನ ಆಡಳಿತ ಮಂಡಳಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಕುದರಂಗಿ, ಸುಳ್ಳಕ್ಕಿ, ಅರೆಕರೆ, ಬ್ಯಾಕರವಳ್ಳಿ, ನಲ್ಲೂಲ್ಲಿ, ಕಾಮನಹಳ್ಳಿ, ನಡ್ಡಲ್ಲಿ ಸೇರಿ ಸುತ್ತಮುತ್ತಲ ಗ್ರಾಮಸ್ಥರು ಆಚರಿಸುವ ವೀರಭದ್ರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಸಕಲೇಶಪುರ ತಾಲ್ಲೂಕು ಮಾತ್ರವಲ್ಲದೆ ಜಿಲ್ಲೆಯ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯ ಭಕ್ತರು ಭಾಗಿಯಾದರು.

ಸಕಲೇಶ್ವರಸ್ವಾಮಿ ಭವ್ಯ ರಥೋತ್ಸವ ಬಿಟ್ಟರೆ ಕುದರಂಗಿ ವೀರಭದ್ರಸ್ವಾಮಿಯ ರಥೋತ್ಸವ ತಾಲ್ಲೂಕಿನ ಎರಡನೇ ದೊಡ್ಡ ರಥೋತ್ಸವವಾಗಿದೆ. ಈ ರಥವನ್ನು ನೂರಕ್ಕೂ ಹೆಚ್ಚು ಅಡಿಗಳ ಉದ್ದದ ಬೆತ್ತದಲ್ಲಿ ಎಳೆಯುವುದೇ ಇಲ್ಲಿನ ವಿಶೇಷ.

# ವಕ್ಫ್ ಮಸೂದೆಗೆ ತಿದ್ದುಪಡಿ: ಬೇಲೂರಿನಲ್ಲಿ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೇಲೂರು: ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ವಕ್ಫ್ ತಿದ್ದುಪಡಿ ಮಸೂದೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ ತಾಲ್ಲೂಕು ಮುಸ್ಲಿಂ ಸಂಘಟನೆಗಳ ಒಕ್ಕೂಟದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಪಟ್ಟಣದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಮುಸ್ಲಿಮರು ತೋಳಿಗೆ ಕಪ್ಪುಪಟ್ಟಿ ಧರಿಸಿ, ವಕ್ಫ್ ತಿದ್ದುಪಡಿ ಮಸೂದೆಯನ್ನು ಹಿಂಪಡೆಯುವಂತೆ ಘೋಷಣೆಗಳನ್ನು ಕೂಗುತ್ತ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಅಬ್ದುಲ್ ಸಮದ್ ಮಾತನಾಡಿ, ಮಸೀದಿ, ಮದರಸಾಗಳ ಸ್ವಂತ ಜಮೀನು ಕಾಪಾಡಿಕೊಳ್ಳಲು ವಕ್ಫ್ ನ್ಯಾಯ ಮಂಡಳಿ ಕೆಲಸ ಮಾಡುತ್ತದೆ. ಆದರೆ ಕೇಂದ್ರ ಸರ್ಕಾರ ಈ ಮಂಡಳಿ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಆರೋಪಿಸುತ್ತಿದೆ. ಹಾಗಾದರೆ ಕೇಂದ್ರ ಸರ್ಕಾರ ನ್ಯಾಯಯುತವಾಗಿ ಆಡಳಿತ ನಡೆಸುತ್ತಿದ್ದೆಯಾ ಎನ್ನುವ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಒರಿಸ್ಸಾದ ಐದು ದೇವಾಲಯಗಳಲ್ಲಿ ಲಕ್ಷಾಂತರ ಎಕರೆ ಜಮೀನಿದೆ. ವಕ್ಫ್‌ನಲ್ಲಿಯೂ ಹಿಂದಿನಿಂದಲೂ ದಾನಿಗಳಿಂದ ಸ್ವೀಕರಿಸಿದ ಆಸ್ತಿಗಳಿವೆ. ಇವೆರಡರ ನಡುವೆ ವಿಭಿನ್ನ ಧೋರಣೆ ವ್ಯಕ್ತಪಡಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಬೇಲೂರು, ಹಳೇಬೀಡು ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸೈಯದ್ ತೌಫಿಕ್ ಮಾತನಾಡಿ, ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂದು ಹೇಳಿದ ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆ, ರಾಜ್ಯಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿ ಮುಸ್ಲಿಂರನ್ನು ತುಳಿಯುವ ಕೆಲಸ ಮಾಡುತ್ತಿದ್ದಾರೆ. ಮುಸ್ಲಿಂ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡುತ್ತೇವೆ ಎಂದು ಹೇಳಿ ತ್ರಿವಳಿ ತಲಾಖ್‌ನಲ್ಲಿ ಬದಲಾವಣೆ ತಂದಿದ್ದಾರೆ. ಬದಲಾವಣೆ ಮಾಡುವಂತೆ ನಿಮ್ಮನ್ನ ಯಾರು ಕೇಳಿದ್ದರು ಎಂದು ಪ್ರಶ್ನಿಸಿದರು.


ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸುಮಾರು 99 ಸಾವಿರ ದೇಶ ಪ್ರೇಮಿಗಳ ಬಿದಾನವಾಗದೆ. ಆ ಪೈಕಿ 65 ಸಾವಿರ ಭಾರತೀಯ ಮುಸ್ಲಿಮರೂ ಇದ್ದರು. ನಮಗೂ ನಮ್ಮ ದೇಶದ ಮೇಲೆ ಅಭಿಮಾನ, ಪ್ರೇಮವಿದೆ. ದೇಶದ ಕಾನೂನು, ಸಂವಿಧಾನವನ್ನು ಗೌರವಿಸುತ್ತಿದ್ದೇವೆ. ಆದರೂ ವಕ್ಫ್ ಮಂಡಳಿಯನ್ನು ಭ್ರಷ್ಟರಂತೆ ಬಿಂಬಿಸಿರುವ ಕೇಂದ್ರ ಸರ್ಕಾರದ ನಿಲುವು ಖಂಡನಿಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪುರಸಭೆ ಸದಸ್ಯ ಬಿ.ಎ.ಜಮಾಲುದ್ದೀನ್, ಮುಖಂಡರಾದ ಎಸ್.ಎ.ಅಬ್ದುಲ್ ಖಾದರ್, ನಹೀಮ್ ಉರ್ ರೆಹಮಾನ್, ತಜ್ಮುಲ್ ಪಾಷ, ಇಮ್ರಾನ್ ಪಾಷ, ಅಸ್ಲಂ, ನವೀದ್, ಅಕ್ರಮ್ ಪಾಷ, ದಾವೂದ್, ಗೆಂಡೇಹಳ್ಳಿ ಅಬ್ಬು, ನೂರ್ ಅಹಮ್ಮದ್, ಆರೀಪ್, ನಾಸೀರ್, ಅಬ್ರಾರ್ ಇದ್ದರು.

# ಅಳಿಯನ ಕೊಲೆಗೆ ಯತ್ನಿಸಿದ ಮಾವ

ಅರಸೀಕೆರೆ: ತವರಿಗೆ ಬಂದಿದ್ದ ಹೆಂಡತಿಯನ್ನು ಕರೆದುಕೊಂಡು ಹೋಗಲು ಬಂದಿದ್ದ ಅಳಿಯನ ಮೇಲೆ ಮಾವ-ಅತ್ತೆ ಹಾಗೂ ಪತ್ನಿ ಸೇರಿ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ತುಮಕೂರು ಜಿಲ್ಲೆ ಗ್ಯಾರಹಳ್ಳಿ ಪಾಳ್ಯ ಗ್ರಾಮದ ರವಿಕುಮಾರ್ ಮೇಲೆ ಮಾವ ಧರ್ಮರಾಜು, ಅತ್ತೆ ನಾಗಮ್ಮ ಹಾಗು ಪತ್ನಿ ವಿದ್ಯಾ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಮೂರು ವರ್ಷಗಳ ಹಿಂದೆ ರವಿಕುಮಾರ್ ಹಾಗು ಅರಸೀಕೆರೆ ತಾಲ್ಲೂಕು ಉಂಡಿಗನಾಳು ಗ್ರಾಮದ ವಿದ್ಯಾ ಅವರ ವಿವಾಹವಾಗಿದ್ದು ಇತ್ತೀಚೆಗೆ ಗ್ಯಾರಹಳ್ಳಿ ಪಾಳ್ಯಕ್ಕೆ ಬಂದಿದ್ದ ಧರ್ಮರಾಜು ಹಾಗೂ ನಾಗಮ್ಮ ತಮ್ಮ ಮಗಳು ವಿದ್ಯಾ ಅವರನ್ನು ಕರೆದುಕೊಂಡು ಬಂದಿದ್ದರು. ಹೆಂಡತಿಯನ್ನು ಕರೆದುಕೊಂಡು ಹೋಗಲು ಸೋಮವಾರ ರವಿಕುಮಾರ್ ಮಾವನ ಮನೆಗೆ ಬಂದಾಗ ಎಲ್ಲರೂ ಸೇರಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಧರ್ಮರಾಜ ಅವರು ಕೊಬ್ಬರಿ ಸುಲಿಯುವ ಕಬ್ಬಿಣದ ಹಾರೆಯಿಂದ ತಲೆಗೆ ಹೊಡೆದು ಗಾಯಗೊಳಿಸಿದರೆ, ನಾಗಮ್ಮ ಕಾಲಿನಿಂದ ಮನಬಂದಂತೆ ಒದ್ದಿದ್ದಾರೆ. ಪತ್ನಿ ವಿದ್ಯಾ ಸಹ ಬಟ್ಟೆ ಹರಿದು ಹಲ್ಲೆ ನಡೆಸಿದ್ದಾರೆ ಎಂದು ರವಿಕುಮಾರ್ ಆರೋಪಿಸಿದ್ದಾರೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಎ. 18 ರಿಂದ ಜೈ ಭೀಮ್ ಕಪ್ ಕ್ರಿಕೆಟ್



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಜೈ ಭೀಮ್ ಯುವಕರ ಸಂಘ ಮತ್ತು ದಲಿತಪರ ಸಂಘಟನೆಗಳ ಒಕ್ಕೂಟದಿಂದ ಅಂಬೇಡ್ಕರ್ ಜನ್ಮ ದಿನದ ಅಂಗವಾಗಿ ಎ. 18 ರಿಂದ 20ರ ತನಕ ಜೈ ಭೀಮ್ ಕಪ್-2025 ಕ್ರಿಕೆಟ್ ಪಂದ್ಯಾವಳಿಯು ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಆಯೋಜಕ ಎ.ವಿ. ಲಿಂಗರಾಜ್ ಮತ್ತು ಎ.ವಿ. ಪೃಥ್ವಿರಾಜ್ ತಿಳಿಸಿದರು.

ಮಂಗಳವಾರ ನಡೆದ ಪತ್ರಿಕಾಗೋಷ್ಟಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಸಚಿವರಾದ ಡಾ. ಹೆಚ್.ಸಿ. ಮಹಾದೇವಪ್ಪ, ಸತೀಶ್ ಜಾರಕಿಹೋಳಿ, ಪ್ರಿಯಾಂಕ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ ರಾಜಣ್ಣ, ಸಂಸದ ಶ್ರೇಯಸ್ ಪಟೇಲ್, ಶಾಸಕ ಎ.ಮಂಜು, ಎ.ಟಿ. ರಾಮಸ್ವಾಮಿ, ಕೃಷ್ಣೇಗೌಡ, ಶ್ರೀಧರ್‌ಗೌಡ, ಯೋಗಾ ರಮೇಶ್ ಅವರು ಸೇರಿ ಇತರ ಗಣ್ಯರು ಬರಲಿದ್ದಾರೆ.

ಇದೇ ಮೊದಲ ಬಾರಿಗೆ ಜೈ ಭೀಮ್ ಕಪ್-2025 ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ. ಈಗಾಗಲೇ 18 ತಂಡಗಳನ್ನು ಮಾಲೀಕರು ಹೊಂದಿದ್ದಾರೆ. ಪಂದ್ಯ ಬೆಳಗ್ಗೆಯಿಂದ ಸಂಜೆ ತನಕ ನಡೆಯಲಿದೆ. ಅಂತಿಮವಾಗಿ ನಡೆಯುವ ಪಂದ್ಯದಲ್ಲಿ ವಿಜೇತರಾದವರಿಗೆ ಮೊದಲ ಬಹುಮಾನವಾಗಿ 1,11,111 ರೂ., ದ್ವಿತೀಯ ಬಹುಮಾನ 66,666 ರೂ. ತೃತೀಯ ಬಹುಮಾನ 44,444 ರೂ. ಮತ್ತು ನಾಲ್ಕನೇ ಬಹುಮಾನ 33,333 ರೂ.ಗಳೊಂದಿಗೆ ಪಾರಿತೋಷಕ ದೊರೆಯಲಿದೆ. ಅಲ್ಲದೆ ಪ್ರತಿ ಪಂದ್ಯಕ್ಕೂ ಮ್ಯಾನ್ ಆಫ್ ದಿ ಮ್ಯಾಚ್ ನೀಡಲಾಗುವುದು. ಬೆಸ್ಟ್ ಬ್ಯಾಟ್ಸ್‌ಮನ್, ಬೌಲರ್, ಫೀಲ್ಡರ್ ಹಾಗೂ ಫೈನಲ್ ಪಂದ್ಯದ ಮ್ಯಾನ್ ಆಫ್ ದಿ ಮ್ಯಾಚ್, ಬೆಸ್ಟ್ ಆಲ್ ರೌಂಡರ್, ಕೀಪರ್, ಟೀಮ್ ಹಾಗೂ ಉತ್ತಮ ಯುವ ಆಟಗಾರರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಮಾಹಿತಿ ನೀಡಿದರು. ಡಾ. ಬಿ.ಆರ್. ಅಂಬೇಡ್ಕರ್ ಹೆಸರಿನ ಜೈ ಭೀಮ್ ಕಪ್ ಕ್ರಿಕೆಟ್ ಪಂದ್ಯಾವಳಿಯನ್ನು ಪಕ್ಷಾತೀತವಾಗಿ ಆಯೋಜನೆ ಮಾಡಲಾಗಿದೆ. ತಾಲ್ಲೂಕಿನ ಎಲ್ಲಾ ಗ್ರಾಪಂಗಳ ಚುನಾಯಿತ ಪ್ರತಿನಿಧಿಗಳು, ಅಭಿಮಾನಿಗಳು, ಪ್ರಗತಿಪರ ಸಂಘಟನೆಗಳ ಮುಖಂಡರು, ದಲಿತ ಸಂಘಟನೆಗಳ ಮುಖಂಡರು ಹಾಗೂ ಸಾರ್ವಜನಿಕರು ಮೂರು ದಿನಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು.

ಆಯೋಜಕರಾದ ಸ್ವಾಮಿ, ಮಾಲ್ತೇಶ್ ಇತರರು ಉಪಸ್ಥಿತರಿದ್ದರು.

# ಬಾಟಲಿ ನೀರು ಕುಡಿಯುವ ಮೊದಲು ಇರಲಿ ಎಚ್ಚರ

## ಪಾಚಿಗಟ್ಟಿದ ನೀರು ಕೊಡುತ್ತಿವೆ ಕಂಪನಿಗಳು

## ಸಂಪೂರ್ಣ ವರದಿ ಬಳಿಕ ಕ್ರಮದ ಭರವಸೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹೋಟೆಲ್, ಮದುವೆ ಸಮಾರಂಭ, ಸಭೆ, ಸರ್ಕಾರಿ ಕಾರ್ಯಕ್ರಮ ಸೇರಿ ಅನೇಕ ಕಡೆ ಬಾಟಲಿ ನೀರು ಕುಡಿಯುವ ರೂಢಿ ಬೆಳೆಸಿಕೊಂಡಿದ್ದರೆ ಅದು ಆರೋಗ್ಯಕ್ಕೆ ಆಪತ್ತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇತ್ತೀಚೆಗೆ ಪ್ರಕಟಿಸಿದ ಕುಡಿಯಲು ಯೋಗ್ಯವಲ್ಲದ ಬಾಟಲಿ ನೀರಿನ ರಾಜ್ಯದ 75 ಮಾದರಿಗಳಲ್ಲಿ ಹಾಸನ ಜಿಲ್ಲೆಯ 5 ಘಟಕಗಳು ಸೇರಿವೆ. ಅದರಲ್ಲೂ ಸಿಗ್ನೆಚರ್ ಕಂಪನಿಯ ನೀರು ಕುಡಿಯಲು ಯೋಗ್ಯವಲ್ಲ ಎಂಬ ವರದಿ ಹೊರಬಿದಿದ್ದೆ. ಸಾರ್ವಜನಿಕರು ಪೂರ್ವಾಪರ ಲೆಕ್ಕಿಸದೆ ಕುಡಿದಿರುವುದು ಪಾಚಿಗಟ್ಟಿದ ನೀರು ಎಂಬುದು ಆಹಾರ ಸುರಕ್ಷಿತ ಅಂಕಿತ ಅಧಿಕಾರಿಗಳ ಹೇಳಿಕೆಯಾಗಿದೆ.

> ಜಿಲ್ಲೆಯ 21 ಕುಡಿಯುವ ನೀರಿನ ಘಟಕಗಳ ಮಾದರಿಯನ್ನು ಪರೀಕ್ಷೆಗೆ ಕಳುಹಿಸಿಕೊಡಲಾಗಿದೆ. 5 ಘಟಕಗಳ ಸಿಗ್ನೆಚರ್ ಹೆಸರಿನ ಬಾಟಲಿಯ ನೀರು ಕಲುಷಿತವಾಗಿದೆ ಎಂಬ ವರದಿ ಬಂದಿದೆ. ಸಂಬಂಧಪಟ್ಟ ಘಟಕಗಳ ಮಾಲೀಕರಿಗೆ ಈಗಾಗಲೇ ಎಚ್ಚರಿಕೆ ನೀಡಿದ್ದು, ಕಾನೂನು ಕ್ರಮ ಜರುಗಿಸಲಾಗುವುದು.
>
> **ಡಾ. ಅನಿಲ್, ಆಹಾರ ಸುರಕ್ಷಿತ ಮತ್ತು ಅಂಕಿತ ಅಧಿಕಾರಿ**




### 21 ಘಟಕಗಳ ನೀರು ಪರೀಕ್ಷೆಗೆ

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ರಾಜ್ಯಾದ್ಯಂತ ಬಾಟಲಿ ನೀರಿನ ಮಾದರಿ ಸಂಗ್ರಹಿಸಿ ಪರೀಕ್ಷೆ ನಡೆಸಿದೆ. ಕಳೆದ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ನಡೆಸಿದ ವಿಶೇಷ ತಪಾಸಣಾ ಅಭಿಯಾನದಲ್ಲಿ ಈ ಸಂಗತಿ ಬಯಲಾಗಿದೆ. ಜಿಲ್ಲೆಯಲ್ಲಿ ಒಟ್ಟು 21 ಕುಡಿಯುವ ನೀರಿನ ಘಟಕಗಳ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿತ್ತು. ಅದರಲ್ಲಿ 5 ಘಟಕಗಳ ನೀರು ಪಾಚಿಗಟ್ಟಿದ್ದು ಬಯಲಾಗಿದೆ. ಉಳಿದ 16 ಘಟಕಗಳ ವರದಿಯು ಒಂದು ವಾರದಲ್ಲಿ ಅಧಿಕಾರಿಗಳ ಕೈ ಸೇರಲಿದೆ. ಈಗ ವರದಿ ಬಂದಿರುವ ಕುಡಿಯುವ ನೀರಿನ ಘಟಕಗಳೆಂದರೆ ಹಾಸನದ 1, ಚನ್ನರಾಯಪಟ್ಟಣ 1, ಅರಕಲಗೂಡು 1, ಹೊಳೆನರಸೀಪುರದ 2 ಘಟಕಗಳು ಸೇರಿವೆ. ಸಾರ್ವಜನಿಕರಿಗೆ ಈ ಘಟಕಗಳಿಂದ ಪೂರೈಕೆ ಮಾಡುತ್ತಿರುವ ನೀರು ಸಂಪೂರ್ಣ ಕಳಪೆಯಾಗಿದೆ ಎಂದು ಈಗಾಗಲೇ ಘಟಕಗಳ ಮಾಲೀಕರಿಗೆ ನೋಟೀಸ್ ನೀಡಿದ್ದು, ಗುಣಮಟ್ಟ ಕಾಯ್ದುಕೊಳ್ಳದಿದ್ದರೆ ಅಂತವರ ವಿರುದ್ಧ ಎಫ್‌ಐಆರ್ ದಾಖಲಿಸಲು ನಿರ್ಧರಿಸಲಾಗಿದೆ. 21 ನೀರಿನ ಘಟಕಗಳ ವರದಿ ಕೈ ಸೇರಿದ ಬಳಿಕ ಮುಂದಿನ ಕ್ರಮ ಜರುಗಿಸಲು ಸಿದ್ಧತೆ ನಡೆಸಲಾಗುತ್ತಿದೆ.

### ಆರೋಗ್ಯದ ಮೇಲೆ ದುಷ್ಪರಿಣಾಮ

ಶುದ್ಧ ಕುಡಿಯುವ ನೀರಿನ ಹೆಸರಿನಲ್ಲಿ ಹತ್ತಾರು ಬಗೆಯ ಬಾಟಲಿಗಳು ಅಂಗಡಿಗಳಲ್ಲಿ ಲಭ್ಯವಿದೆ. ಹೋಲ್‌ಸೆಲ್ ಅಂಗಡಿಗಳಲ್ಲಿ ಅರ್ಧ ಲೀಟರ್ ಬಾಟಲಿಗೆ ಕೇವಲ 4 ರಿಂದ 5 ರೂ. ಪಡೆಯುವುದರಿಂದ ಮದುವೆ ಮತ್ತಿತರ ಸಮಾರಂಭ, ಹೋಟೆಲ್‌ಗಳಲ್ಲಿ ಈ ನೀರನ್ನೇ ನೀಡಲಾಗುತ್ತಿದೆ. ಆದರೆ ದೀರ್ಘಕಾಲದ ವರೆಗೆ ಪಾಚಿಗಟ್ಟಿರುವುದು, ಸೂಕ್ಷ್ಮ ಕೀಟಾಣುಗಳು ಪರೀಕ್ಷೆಯಲ್ಲಿ ಗೊತ್ತಾಗಿದೆ. ಹೀಗಾಗಿ ಸಾರ್ವಜನಿಕರು ಬಾಟಲಿ ನೀರು ಕುಡಿಯುವಾಗ ಅತ್ಯಂತ ಜಾಗೃತೆ ವಹಿಸಬೇಕಾಗಿದೆ.

### ಬಸ್ ನಿಲ್ದಾಣಗಳಲ್ಲಿ ವ್ಯಾಪಕ ವ್ಯಾಪಾರ

ಕಳಪೆ ಗುಣಮಟ್ಟದ ನೀರಿನ ಬಾಟಲಿ ಹಾಗೂ ಆಹಾರ ಪದಾರ್ಥ ಮಾರಾಟ ನಗರದ ಹೊಸ ಬಸ್ ನಿಲ್ದಾಣದಲ್ಲಿ ವ್ಯಾಪಕವಾಗಿ ಎನ್ನಲಾಗಿದೆ. ಕಡಿಮೆ ಬೆಲೆಗೆ ಸಿಗುತ್ತದೆ ಎಂಬ ಕಾರಣಕ್ಕೆ ತೀರಾ ಕೆಳಮಟ್ಟದ ಬಾಟಲಿಗಳನ್ನು ಮಾರಾಟ ಮಾಡುತ್ತಿದ್ದಾರೆ. ಹೋಟೆಲ್‌ನಲ್ಲಿ ಆಹಾರ ತಯಾರಿಕೆಯಲ್ಲೂ ಗುಣಮಟ್ಟ ಕಾಪಾಡುತ್ತಿಲ್ಲ. ಈ ಬಗ್ಗೆ ಹಲವು ಸಭೆ ನಡೆಸಿದರೂ ಪ್ರಯೋಜನವಾಗುತ್ತಿಲ್ಲ ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿಯೊಬ್ಬರು ಹೇಳಿದರು.

ಇತ್ತೀಚೆಗೆ ಜಿಲ್ಲೆಗೆ ಭೇಟಿ ನೀಡಿದ್ದ ಆಹಾರ ಆಯೋಗ ಅಧ್ಯಕ್ಷ ಹೆಚ್. ಕೃಷ್ಣ ಅವರು ಜಿಲ್ಲೆಯ 116 ಹೋಟೆಲ್‌ಗಳಲ್ಲಿ ಗುಣಮಟ್ಟದ ಆಹಾರ ನೀಡುತ್ತಿಲ್ಲ ಎಂಬ ವರದಿ ಬಹಿರಂಗಪಡಿಸಿದ್ದಾರೆ. ಆ ಸಂಬಂಧ ಎಚ್ಚೆತ್ತುಕೊಂಡಿರುವ ಆಹಾರ ಸುರಕ್ಷತಾ ಅಧಿಕಾರಿ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಕೆಲ ಹೋಟೆಲ್ ಮಾಲೀಕರಿಗೆ ಕಡೆಯ ಎಚ್ಚರಿಕೆ ನೀಡಿದ್ದು, ಮತ್ತೆ ಕೆಲವರ ವಿರುದ್ಧ ಎಫ್‌ಐಆರ್ ಸಹ ದಾಖಲಿಸಿದ್ದಾರೆ.


### ಸಾರ್ವಜನಿಕರು ಏನು ಮಾಡಬೇಕು

ಉಸಿರಾಡುವ ಗಾಳಿಯು ವಿಷವಾಗಿರುವುದರಿಂದ ಆರೋಗ್ಯಯುತ ಜೀವನಕ್ಕೆ ಸಾಕಷ್ಟು ಮುನ್ನೆಚ್ಚರಿಕೆ ವಹಿಸಬೇಕು. ಮನೆಯಿಂದ ಹೊರ ಹೋಗುವಾಗ ಸಾಧ್ಯವಾದಷ್ಟು ಮನೆಯಿಂದ ನೀರನ್ನು ತೆಗೆದುಕೊಂಡು ಹೋಗುವುದನ್ನು ರೂಢಿಸಿಕೊಳ್ಳಬೇಕು.

ಬಾಟಲಿ ನೀರು ಕುಡಿಯುವುದು ಅತ್ಯವಶ್ಯವಾದರೆ ಕಂಪನಿಯ ಹೆಸರನ್ನು ಸರಿಯಾಗಿ ಓದಬೇಕು.

ಹಾಸನದಲ್ಲಿ ಅಧಿಕ ಪ್ರಮಾಣದಲ್ಲಿ ಸರಬರಾಜು ಆಗುತ್ತಿರುವ ಸಿಗ್ನೆಚರ್ ಕಂಪನಿಯ ನೀರು ಕುಡಿಯಲು ಯೋಗ್ಯವಲ್ಲ ಎಂಬ ವರದಿ ಬಂದಿರುವುದರಿಂದ ಯಾವ ಕಾರಣಕ್ಕೂ ಖರೀದಿಸಬಾರದು.

# ಅಂಬೇಡ್ಕರ್ ಹಾಕಿಕೊಟ್ಟ ಮಾರ್ಗದಲ್ಲಿ ಸಾಗೋಣ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪೂಜಿಸುವ ದೇವರನ್ನು ಇದುವರೆಗೂ ಯಾರೂ ಸಹ ಈ ಭೂಮಿ ಮೇಲೆ ಕಂಡಿಲ್ಲ. ಕಣ್ಣಿಗೆ ಕಾಣುವ ದೇವರು ಇದ್ದಾರೆ ಎಂದರೆ ಅದು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮಾತ್ರ ಎಂದು ಶಾಂತಿಗ್ರಾಮ ಪೊಲೀಸ್ ಠಾಣೆ ಪಿಎಸ್‌ಐ ಅರುಣ್ ಕುಮಾರ್ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಶಾಂತಿಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಯುವಕರ ಬಳಗದ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಸಮಾಜ ಆರ್ಥಿಕವಾಗಿ ಸದೃಢವಾಗಲು ಶಿಕ್ಷಣ ಮುಖ್ಯ. ಯುವ ಸಮೂಹ ಹಾಗೂ ಹೊಸ ಪೀಳಿಗೆಗೆ ಡಾ. ಅಂಬೇಡ್ಕರ್ ಅವರ ಆಶಯಗಳನ್ನು ಪರಿಚಯಿಸಬೇಕಿದೆ. ನಾವು ಈ ಭೂಮಿ ಮೇಲೆ ಇದುವರೆಗೂ ಯಾರು ಸಹ ದೇವರನ್ನು ಕಂಡಿಲ್ಲ. ಕಣ್ಣಾರೆ ಏನಾದರೂ ದೇವರನ್ನು ಕಂಡಿದ್ದೇವೆ ಎಂದರೆ ಅದು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಮಾತ್ರ ಎಂದು ಹೇಳಿದರು.

ಭೀಮ್ ಆರ್ಮಿ ಜಿಲ್ಲಾಧ್ಯಕ್ಷ ಜಗಣ್ಣ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದ ಪ್ರಮುಖ ಶಿಲ್ಪಿಯಾಗಿದ್ದಾರೆ. ಅವರು ಕಾನೂನು ತಜ್ಞರಾಗಿ, ಬರವಣಿಗೆಗಾರರಾಗಿ, ವಿದ್ವಾಂಸರಾಗಿ, ತತ್ವಜ್ಞಾನಿಯಾಗಿ ಅನೇಕ ವಿಷಯಗಳಲ್ಲಿ ಅಗಾಧ ಪಾಂಡಿತ್ಯ ಹೊಂದಿದ್ದರು. ಅವರ ತತ್ವಗಳನ್ನು ನಾವು ಅನುಸರಿಸಿ ನಡೆಯಬೇಕು ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಶಾಂತ್, ಸದಸ್ಯರಾದ ವಿನಯ್, ಶಿಕ್ಷಕ ಯೋಗೇಶ್, ಗಂಗಣ್ಣ, ಗ್ರಾಮ ಒನ್ ಪ್ರದೀಪ್ ಹೊಂಗೆರೆ, ಕುಮಾರ್, ಪ್ರವೀಣ್ ಗೌಡ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

**ಏಪ್ರಿಲ್ 17**

1492: ಕ್ರಿಸ್ಟೋಫರ್ ಕೊಲಂಬಸ್ ಸ್ಪೇನ್ ರಾಜಮನೆತನದಿಂದ ಏಷ್ಯಾಕ್ಕೆ ಸಾಗರ ಮಾರ್ಗ ಹುಡುಕಲು ಒಪ್ಪಂದ ಮಾಡಿಕೊಂಡರು.

1521: ಮಾರ್ಟಿನ್ ಲೂಥರ್ ತನ್ನ ಧರ್ಮೀಯ ತತ್ವಗಳನ್ನು ಸಮರ್ಥಿಸಲು ವರ್ಮ್ಸ್‌ನ ಡಯಟ್‌ನಲ್ಲಿ ಹಾಜರಾದರು.

1790: ಅಮೆರಿಕದ ಸಂಸ್ಥಾಪಕರಲ್ಲೊಬ್ಬರಾದ ಬೆಂಜಮಿನ್ ಫ್ರ್ಯಾಂಕ್ಲಿನ್ ನಿಧನರಾದರು.

1961: ಸಿಐಎ ಬೆಂಬಲಿತ ಬೇ ಆಫ್ ಪಿಗ್ಸ್ ದಾಳಿ ಕ್ಯೂಬಾದಲ್ಲಿ ವಿಫಲವಾಯಿತು.

1964: ಫೋರ್ಡ್ ಮೋಟಾರ್ಸ್ ಮಸ್ಟ್ಯಾಂಗ್ ಕಾರನ್ನು ಮೊದಲ ಬಾರಿಗೆ ಅನಾವರಣಗೊಳಿಸಿತು.

1970: ಅಪೊಲೊ 13 ನೌಕೆ ಭೂಮಿಗೆ ಸುರಕ್ಷಿತವಾಗಿ ಮರಳಿತು.

1975: ಫ್ನಾಮ್ ಪೆನ್ ಖಮೇರ್ ರೂಜ್‌ನ ಹಿಡಿತಕ್ಕೆ ಬಿದ್ದು, ಕಂಬೋಡಿಯಾದಲ್ಲಿ ಕ್ರೂರ ಆಡಳಿತ ಶುರುವಾಯಿತು.

1982: ಕೆನಡಾ ತನ್ನ ಸಾರ್ವಭೌಮತ್ವವನ್ನು ಸಂಪೂರ್ಣವಾಗಿ ಘೋಷಿಸಿತು.

2011: ಜನಪ್ರಿಯ ಸರಣಿ Game of Thrones ಟಿವಿಯಲ್ಲಿ ಪ್ರಾರಂಭವಾಯಿತು.

2014: ನೊಬೆಲ್ ವಿಜೇತ ಲೇಖಕ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ನಿಧನರಾದರು.

**ವಿಶೇಷ ದಿನಗಳು**

ವಿಶ್ವ ಹಿಮೋಫಿಲಿಯಾ ದಿನ: ರಕ್ತಸ್ರಾವದ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಲು.

ಅಂತರರಾಷ್ಟ್ರೀಯ ಹೈಕು ದಿನ: ಜಪಾನೀ ಶೈಲಿಯ ಕವನದ ದಿನಾಚರಣೆ.

**ಭಾರತದ ವಿಶೇಷ**

1897: ಆಧ್ಯಾತ್ಮಿಕ ಗುರು ನಿಸರ್ಗದತ್ತ ಮಹಾರಾಜ್ ಜನನ.

1988: ಭಾರತದ ಮೊದಲ ಮಹಿಳಾ ರಾಜ್ಯಪಾಲರಾದ ವಿ.ಎಸ್. ರಮಾದೇವಿ ನಿಧನ.


1930: ಉಪ್ಪು ಸತ್ಯಾಗ್ರಹದ ಸಂದರ್ಭದಲ್ಲಿ ಬ್ರಿಟಿಷರು ಗಾಂಧೀಜಿಯ ಮಗ ದೇವದಾಸ್ ಗಾಂಧಿ ಸೇರಿ 27 ಜನರನ್ನು ಬಂಧಿಸಿದರು.

1975: ಡಾ. ಸರ್ವಪಳ್ಳಿ ರಾಧಾಕೃಷ್ಣನ್ ನಿಧನ.

# ವಿಶ್ವ ಹಿಮೋಫಿಲಿಯಾ ದಿನ: ಜಾಗೃತಿಯತ್ತ ಒಂದು ಹೆಜ್ಜೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಪ್ರತಿವರ್ಷ ಏಪ್ರಿಲ್ 17ರಂದು ಆಚರಿಸಲಾಗುವ ವಿಶ್ವ ಹಿಮೋಫಿಲಿಯಾ ದಿನವು, ಹಿಮೋಫಿಲಿಯಾ ಮತ್ತು ಇತರ ರಕ್ತಸ್ರಾವ ಸಂಬಂಧಿತ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಈ ಕಾಯಿಲೆಯಿಂದ ಬಳಲುತ್ತಿರುವವರಿಗೆ ಬೆಂಬಲ ನೀಡಲು ಸಮರ್ಪಿತ ದಿನವಾಗಿದೆ. ಈ ದಿನದ ಉದ್ದೇಶ, ಜಗತ್ತಿನಾದ್ಯಂತ ರೋಗಿಗಳ ಬದುಕನ್ನು ಉತ್ತಮಗೊಳಿಸುವಂತ ಚಿಕಿತ್ಸೆ, ಶಿಕ್ಷಣ ಮತ್ತು ಸಂಶೋಧನೆಯ ಅವಶ್ಯಕತೆಯನ್ನು ಈ ಲೇಖನ ಒಳಗೊಂಡಿದೆ.



### ಹಿಮೋಫಿಲಿಯಾ ಎಂದರೇನು?

ಹಿಮೋಫಿಲಿಯಾ ಅಪರೂಪದ ಆನುವಂಶಿಕ ಕಾಯಿಲೆ. ಈ ಕಾಯಿಲೆಯು ರಕ್ತವನ್ನು ಗಟ್ಟಿಯಾಗಿಸಲು ಅಗತ್ಯವಿರುವ ಕ್ಲಾಟಿಂಗ್ ಫ್ಯಾಕ್ಟರ್ ಎಂಬ ಪ್ರೋಟೀನ್‌ಗಳ ಕೊರತೆಯಿಂದ ಉಂಟಾಗುತ್ತದೆ. ಪರಿಣಾಮ ಸಣ್ಣ ಗಾಯಗಳೂ ಗಂಭೀರ ರಕ್ತಸ್ರಾವಕ್ಕೆ ಕಾರಣವಾಗಬಹುದು. ಸಾಮಾನ್ಯವಾಗಿ ಪುರುಷರು ಹೆಚ್ಚು ಈ ಕಾಯಿಲೆಗೆ ಒಳಗಾಗುತ್ತಾರೆ. ಆದರೆ ಮಹಿಳೆಯರು ವಾಹಕರಾಗಿರಬಹುದು.

1989ರಲ್ಲಿ ವಿಶ್ವ ಹಿಮೋಫಿಲಿಯಾ ಫೆಡರೇಶನ್ (WFH) ಈ ದಿನವನ್ನು ಸ್ಥಾಪಿಸಿತು. ಇದರ ಸ್ಥಾಪಕರಾದ ಫ್ರಾಂಕ್ ಶ್ನಾಬೆಲ್ರ ಜನ್ಮದಿನವಾದ ಏಪ್ರಿಲ್ 17ನೇ ತಾರೀಖನ್ನು ದಿನಾಚರಣೆಗೆ ಆಯ್ಕೆ ಮಾಡಲಾಯಿತು.

### ಭಾರತದಲ್ಲಿ ಹಿಮೋಫಿಲಿಯಾ


ಭಾರತದಲ್ಲಿ ಅಂದಾಜು 20,000ಕ್ಕೂ ಹೆಚ್ಚು ಜನರು ಹಿಮೋಫಿಲಿಯಾದಿಂದ ಬಳಲುತ್ತಿದ್ದಾರೆ. ಆದರೆ, ನಿಖರವಾದ ರೋಗ ನಿರ್ಣಯದ ಕೊರತೆಯಿಂದ ಈ ಸಂಖ್ಯೆ ಇನ್ನೂ ಹೆಚ್ಚಿರಬಹುದು.

### ಮುಖ್ಯ ಸವಾಲುಗಳು

ಚಿಕಿತ್ಸೆಯ ದುಬಾರಿತನ: ಕ್ಲಾಟಿಂಗ್ ಫ್ಯಾಕ್ಟರ್ ಔಷಧಿಗಳು ಬಹಳ ದುಬಾರಿ

ಜಾಗೃತಿಯ ಕೊರತೆ: ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅರಿವಿನ ಕೊರತೆ

ವೈದ್ಯಕೀಯ ಸೌಲಭ್ಯಗಳ ಕೊರತೆ: ಹಲವೆಡೆ ತಜ್ಞರು ಅಥವಾ ಚಿಕಿತ್ಸೆ ಕೇಂದ್ರಗಳ ಕೊರತೆ ಆದರೂ, ಹಿಮೋಫಿಲಿಯಾ ಫೆಡರೇಶನ್ ಆಫ್ ಇಂಡಿಯಾ (WFH) ಹಾಗೂ ಇನ್ನಿತರ ಎನ್‌ಜಿಒಗಳು ರೋಗಿಗಳಿಗೆ ಚಿಕಿತ್ಸೆ, ಶಿಕ್ಷಣ ಮತ್ತು ಬೆಂಬಲ ನೀಡುವಲ್ಲಿ ಶ್ಲಾಘನೀಯ ಕೆಲಸ ಮಾಡುತ್ತಿವೆ. ಕೆಲವು ರಾಜ್ಯ ಸರ್ಕಾರಗಳು ಉಚಿತ ಫ್ಯಾಕ್ಟರ್ ಔಷಧ ವಿತರಣೆಯನ್ನೂ ಆರಂಭಿಸಿವೆ.



### ಭವಿಷ್ಯದ ದಿಕ್ಕು

ಜೀನ್ ಥೆರಪಿ ಸೇರಿದಂತೆ ಇತ್ತೀಚಿನ ವೈದ್ಯಕೀಯ ಸಂಶೋಧನೆಗಳು, ಹಿಮೋಫಿಲಿಯಾ ಚಿಕಿತ್ಸೆಗಾಗಿ ಶಾಶ್ವತ ಪರಿಹಾರ ಒದಗಿಸುವ ನಿರೀಕ್ಷೆಯನ್ನು ಹುಟ್ಟುಹಾಕಿವೆ. ಆದರೆ ಈ ವಿಧದ ಚಿಕಿತ್ಸೆ ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಜಾಗತಿಕ ಸಹಕಾರ ಮತ್ತು ಆರ್ಥಿಕ ನೆರವು ಅತ್ಯಗತ್ಯ.

ವಿಶ್ವ ಹಿಮೋಫಿಲಿಯಾ ದಿನವು ಕೇವಲ ಒಂದು ದಿನದ ಆಚರಣೆ ಅಲ್ಲ. ಇದು ಮಾನವೀಯತೆ, ಸಮಾನತೆ, ಮತ್ತು ಆರೋಗ್ಯ ಹಕ್ಕಿಗಾಗಿ ನಡೆಯುವ ಒಂದು ಜಾಗತಿಕ ಚಳವಳಿ. ಈ ಏಪ್ರಿಲ್ 17ರಂದು ಪ್ರತಿಬ್ಬರೂ ತಿಳವಳಿಕೆ, ಸಹಾನುಭೂತಿ ಮತ್ತು ಕ್ರಿಯಾತ್ಮಕ ನೆರವು ಮೂಲಕ ಒಂದು ಬದಲಾವಣೆ ತರುವ ಪ್ರಯತ್ನ ಮಾಡೋಣ.

### ಈ ದಿನದ ಮುಖ್ಯ ಗುರಿಗಳು

- ಜಾಗೃತಿ ಮೂಡಿಸುವುದು: ರಕ್ತಸ್ರಾವ ಕಾಯಿಲೆಗಳ ಕುರಿತು ಸಾರ್ವಜನಿಕ ಅರಿವು ಹೆಚ್ಚಿಸುವುದು
- ಸೂಕ್ತ ಚಿಕಿತ್ಸೆಗೆ ಪ್ರೇರಣೆ: ಎಲ್ಲರಿಗೂ ಸಮರ್ಪಕ ಚಿಕಿತ್ಸೆಯ ಲಭ್ಯತೆ ಖಾತ್ರಿಪಡಿಸುವುದು
- ರೋಗಿಗಳಿಗೆ ಬೆಂಬಲ: ರೋಗಿಗಳು ಮತ್ತು ಅವರ ಕುಟುಂಬಗಳಿಗೆ ಭಾವನಾತ್ಮಕ ಹಾಗೂ ವೈದ್ಯಕೀಯ ನೆರವು ನೀಡುವುದು
- ಸಂಶೋಧನೆಗೆ ಉತ್ತೇಜನ: ಶಾಶ್ವತ ಪರಿಹಾರಗಳತ್ತ ನುಗ್ಗುವ ಹೊಸ ಚಿಕಿತ್ಸೆಗಳ ಸಂಶೋಧನೆಗೆ ಉತ್ತೇಜನ

### ನಾವು ಏನು ಮಾಡಬಹುದು?

- ಹಿಮೋಫಿಲಿಯಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಅರಿವು ಪಡೆಯಿರಿ
- ಜಾಗೃತಿ ಸಂದೇಶಗಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಹರಡಿ
- ಸ್ಥಳೀಯ ಸಂಸ್ಥೆಗಳಿಗೆ ದಾನ ನೀಡಿ ಅಥವಾ ಸ್ವಯಂ ಸೇವಕರಾಗಿ ಕೆಲಸ ಮಾಡಿ
- ರಕ್ತದಾನ ಮಾಡುವ ಮೂಲಕ ರೋಗಿಗಳಿಗೆ ಆವಶ್ಯಕವಾದ ರಕ್ತ ಒದಗಿಸಬಹುದು

### ಈ ವರ್ಷದ ಘೋಷ ವಾಕ್ಯ

ರಕ್ತಸ್ರಾವ ಕಾಯಿಲೆಯಿಂದ ಬಳಲುವ ಮಹಿಳೆಯರು ಮತ್ತು ಬಾಲಕಿಯರಿಗೆ ಸಮರ್ಪಕ ರೋಗನಿರ್ಣಯ ಚಿಕಿತ್ಸೆ ಮತ್ತು ಆರೈಕೆ ಲಭ್ಯವಾಗುವಂತೆ ಪ್ರೇರೇಪಿಸುವುದು.

### ಅವಶ್ಯಕತೆ

ಮಹಿಳೆಯರಲ್ಲೂ ರಕ್ತಸ್ರಾವ ಕಾಯಿಲೆ ಇರುತ್ತದೆ ಎಂಬ ಅರಿವು ಮೂಡಿಸುವುದು ಅಲ್ಪಗುಣಮಟ್ಟದ ರೋಗನಿರ್ಣಯದ ಪ್ರಮಾಣ ಕಡಿಮೆ ಮಾಡುವುದು ಸಮಾನ ಚಿಕಿತ್ಸಾ ಅವಕಾಶ ಸೃಷ್ಟಿಸುವುದು

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248